ರಾಯಚೂರು ವಿಶ್ವವಿದ್ಯಾಲಯ RAICHUR UNIVERSITY

ಕೃಷ್ಣತುಂಗ ಆವರಣ, ಮಂತ್ರಾಲಯ ರಸ್ತೆ, ರಾಷ್ಟ್ರೀಯ ಹೆದ್ದಾರಿ–167, ಯರಗೇರಾ – 584 133, ರಾಯಚೂರು, ಕರ್ನಾಟಕ

**ಕಾಲೇಜು ಅಭಿವೃದ್ಧಿ ಮಂಡಳಿ**

ಕ್ರ.ಸ.:ರಾವಿರಾ/ಸಿಡಿಸಿ/2025–26/ 11 ದಿನಾಂಕ: 27/11/2024

## ಸುತ್ತೋಲೆ

ವಿಷಯ : 2025-26ನೇ ಸಾಲಿನ ಸಂಯೋಜನಾ ಅರ್ಜಿಯನ್ನು Edit ಮಾಡಿಕೊಳ್ಳುವ ಕುರಿತು

2025-26ನೇ ಶೈಕ್ಷಣಿಕ ಸಾಲಿಗೆ ಸಂಯೋಜನಾ ಅರ್ಜಿ ಸಲ್ಲಿಸಿದ ರಾಯಚೂರು ವಿಶ್ವವಿದ್ಯಾಲಯದ ಎಲ್ಲಾ ಮಹಾವಿದ್ಯಾಲಯಗಳಿಗೆ ತಿಳಿಸುವುದೇನೆಂದರೆ ಈಗಾಗಲೇ 2025-26ನೇ ಸಾಲಿನ ಸಂಯೋಜನಾ ಅರ್ಜಿ ಸಲ್ಲಿಸುವ ದಿನಾಂಕ ಮುಕ್ತಾಯಗೊಂಡಿದೆ. ಸಂಯೋಜನಾ ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ಬಿ.ಎ ಮತ್ತು ಬಿ.ಎಸ್ಸಿ ಪ್ರೊಗ್ರಾಮ್‌ಗಳಲ್ಲಿ ಆಯ್ಕೆ ಮಾಡಿಕೊಂಡ ವಿಷಯ ಸಮೂಹಗಳು (Combinations) ಮತ್ತು ಅವುಗಳ ಪ್ರವೇಶ ಸಂಖ್ಯೆ ಇದರ ಆಧಾರದ ಮೇಲೆಯೇ ಬರುವ 2025-26ನೇ ಸಾಲಿಗೆ ಪ್ರವೇಶ ನೀಡಬೇಕಾಗುತ್ತದೆ. UUCMS ನಲ್ಲಿ ಯಾವುದೇ ಬದಲಾವಣೆಗೆ ಅವಕಾಶ ಇರುವುದಿಲ್ಲ.

2025-26ನೇ ಸಾಲಿನ ಸಂಯೋಜನಾ ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ವಿಷಯ ಸಮೂಹಗಳು ಮತ್ತು ಪ್ರವೇಶ ಸಂಖ್ಯೆಯಲ್ಲಿ ಏನಾದರೂ ಬದಲಾವಣೆ ಮಾಡಲು ಇಚ್ಛಿಸುವ ಮಹಾವಿದ್ಯಾಲಯಗಳು 30.11.2024ರೊಳಗಾಗಿ ವಿಶ್ವವಿದ್ಯಾಲಯಕ್ಕೆ ಪತ್ರ ಬರೆದಲ್ಲಿ ತಮ್ಮ Online Application ನ್ನು Revoke ಮಾಡಿ ತಮಗೆ ಲಭ್ಯವಾಗುವಂತೆ ಕ್ರಮ ಕೈಗೊಳ್ಳಲಾಗುವುದು, ಕಾಲೇಜಿನ User ID ಮತ್ತು Password ಉಪಯೋಗಿಸಿ Edit ಮಾಡಿ ದಿನಾಂಕ 02.12.2024 ರೊಳಗಾಗಿ resubmit ಮಾಡಲು ಕೋರಲಾಗಿದೆ. ಅಲ್ಲದೇ ತಮ್ಮ ಅರ್ಜಿಯಲ್ಲಿ ಯಾವುದೇ ಭಾಗದ ದತ್ತಾಂಶದ ನಿಖರತೆಗಾಗಿ ಬದಲಾವಣೆ ಮಾಡಿಕೊಳ್ಳಬಹುದಾಗಿದೆ. ಈ ಸೌಲಭ್ಯವನ್ನು ಉಪಯೋಗಿಸಿದ ಕಾಲೇಜುಗಳು ಮತ್ತೊಮ್ಮೆ ಸಂಯೋಜನಾ ಅರ್ಜಿಯನ್ನು ಮುದ್ರಿಸಿಕೊಂಡು Hard Copy ಯನ್ನು LIC ತಂಡಕ್ಕೆ ನೀಡಲು ಕೋರಲಾಗಿದೆ. ಈ ಮಾಹಿತಿಯನ್ನು ಮಹಾವಿದ್ಯಾಲಯದ ಪ್ರಾಂಶುಪಾಲರು ತೀಕ್ಷಣವಾಗಿ ಪರಿಗಣಿಸತಕ್ಕದ್ದು.

27/11/24

(ಡಾ. ಶಂಕರ ವ್ಹಿ.)
ಕೆ.ಎ.ಎಸ್ (ಆಯ್ಕೆ ಶ್ರೇಣಿ)
ಕುಲಸಚಿವರು
ರಾಯಚೂರು ವಿಶ್ವವಿದ್ಯಾಲಯ ರಾಯಚೂರು

ಕುಲಸಚಿವರು
ರಾಯಚೂರು ವಿಶ್ವವಿದ್ಯಾಲಯ
ರಾಯಚೂರು

ಪ್ರತಿಗಳು :

1. ಪ್ರಾಂಶುಪಾಲರು, ಸಂಯೋಜನಾ ಅರ್ಜಿ ಸಲ್ಲಿಸಿದ ಮಹಾವಿದ್ಯಾಲಯಗಳು, ರಾಯಚೂರು ವಿಶ್ವವಿದ್ಯಾಲಯ ರಾಯಚೂರು.
2. ಕುಲಪತಿಗಳ/ಕುಲಸಚಿವರ ಆಪ್ತ ಕಾರ್ಯದರ್ಶಿಗಳು, ರಾಯಚೂರು ವಿಶ್ವವಿದ್ಯಾಲಯ ರಾಯಚೂರು.
3. ಕಛೇರಿ ಪ್ರತಿ.